| 1. | ಉಮಾ ಹಾಡನ್ನು ಹಾಡಿದಳು. | | | |
| 2. | ಕೇಶವನು ಮಾವಿನಕಾಯನ್ನು ತಿಂದನು. | | | |
| 3. | ಗಣೇಶ ಗಡಿಗೆಯನ್ನು ಒಡೆದನು. | | | |
| 4. | ಹಸೀನ ಕೊಡೆ ಬಿಡಿಸಿದಳು. | | | |
| 5. | ರಜನಿ ಸಿನಿಮಾ ನೋಡಿದಳು. | | | |

©KTBS NOT TO BE REPUBLISHED

ಊ) ಕೆಳಗಿನ ಪಟ್ಟಿಯಲ್ಲಿರುವ ಪದಗಳಿಂದ ವಾಕ್ಯ ರಚಿಸಿ. ನಿಮ್ಮಿಂದ ಎಷ್ಟು ವಾಕ್ಯಗಳನ್ನು ರಚಿಸಲು ಸಾಧ್ಯ? ಪ್ರಯತ್ನಿಸಿ.

| | | | |
|---|---|---|---|
| ಸುರೇಶ | ಕೋಳಿಯು | ಸೂರ್ಯ | ಕಮಲ |
| ಸೋಮವಾರ | ಮುಂಜಾನೆ | ಏಳಬೇಕು | ಬೇಗನೆ |
| ಬೆಳಕು | ಶಾಲೆಗೆ | ರಹೀಮಾ | ಕೂಗುತ್ತದೆ |
| ಒಳ್ಳೆಯವನು | ಹೋದನು | ರಜೆ | ಬೀರುತ್ತದೆ |

| | |
|---|---|
| ಮಾದರಿ : ಮುಂಜಾನೆ ಕೋಳಿಯು ಕೂಗುತ್ತದೆ. | |
| | |
| | |
| | |
| | |

# ಕ್ರಿಯಾಪದ

ಕ್ರಿಯೆಯನ್ನು ಸೂಚಿಸುವ ಪದವೇ 'ಕ್ರಿಯಾಪದ'. ಕ್ರಿಯಾಪದದ ಮೂಲರೂಪವೇ 'ಧಾತು'.

ಖ) ಈ ಕೆಳಗಿನ ವಾಕ್ಯಗಳನ್ನು ಓದಿಕೊಂಡು ಕ್ರಿಯಾಪದವನ್ನು ಆಯ್ದು ಬರೆಯಿರಿ.

| ವಾಕ್ಯ | ಕ್ರಿಯಾಪದ |
|---|---|
| ಮಗು ಹಾಲನ್ನು ಕುಡಿಯುತ್ತಿದೆ. | |
| ನಳದಲ್ಲಿ ನೀರು ಬರುತ್ತಿದೆ. | |
| ರಸ್ತೆಯಲ್ಲಿ ವಾಹನಗಳು ಸಂಚರಿಸುತ್ತಿವೆ. | |
| ಮಹೇಶನು ಕಛೇರಿಗೆ ಬಂದನು. | |
| ಶೀಲಾ ಹಾಡೊಂದನ್ನು ಹಾಡಿದಳು. | |
| ಮಲ್ಲಪ್ಪ ಹೊಲದಲ್ಲಿ ದುಡಿಯುತ್ತಿದ್ದಾನೆ. | |
| ಜಾಕಿರ್ ಬೈಸಿಕಲ್ಲು ತುಳಿಯುತ್ತಿದ್ದಾನೆ. | |
| ಸರಸ್ವತಿಯು ಪಾಠವನ್ನು ಓದಿದಳು. | |
| ಭಕ್ತರು ಪ್ರಾರ್ಥನಾ ಮಂದಿರಕ್ಕೆ ಬಂದರು. | |
| ಕಳೆದ ಹತ್ತು ದಿನಗಳಿಂದ ಮಳೆ ಬಂದಿಲ್ಲ. | |
| ರಸ್ತೆ ತುಂಬಾ ನೀರು ಹರಡಿದೆ, ಜಾರಿ ಬಿದ್ದೀಯೆ ಜೋಕೆ! | |
| ಶಾಲಾ ಘಂಟೆ ಬಾರಿಸಿತು. | |
| ಮಕ್ಕಳು ಪಾಠವನ್ನು ಓದುವರು. | |
| ರಾಜು ಮನೆಗೆ ಬಂದನು. | |
| ಹಕ್ಕಿ ಮರದ ಪೊಟರೆಯಲ್ಲಿ ಗೂಡು ಕಟ್ಟಿದೆ. | |
| ನಿಮಗೆಲ್ಲಾ ಶುಭವಾಗಲಿ. | |
| ಈ ದಿನ ಮಳೆ ಬಂದೀತು. | |
| ಇಂದು ರವಿ ಶಾಲೆಗೆ ಬಾರನು. | |

@KTBS NOT TO BE REPUBLISHED

## ಒ) ಕಾಲಸೂಚಕ ಪ್ರತ್ಯಯಗಳ ಬಗ್ಗೆ ತಿಳಿಯಿರಿ.

ಕೆಲಸ ಮುಗಿಯಿತು ಎಂಬರ್ಥದಲ್ಲಿ 'ದ', ಕೆಲಸ ನಡೆಯುತ್ತಿದೆ ಎಂಬರ್ಥದಲ್ಲಿ 'ಉತ್ತ' ಹಾಗೂ ಕೆಲಸ ನಡೆಯಬಹುದೆಂಬ ಅರ್ಥದಲ್ಲಿ 'ಉವ' ಎಂಬ ಕಾಲಸೂಚಕ ಪ್ರತ್ಯಯಗಳು ಬಳಕೆಯಾಗುತ್ತವೆ.

- **ಗಮನಿಸಿರಿ :** ಭೂತಕಾಲ – 'ದ' (ಪ್ರತ್ಯಯ)
  ವರ್ತಮಾನ – 'ಉತ್ತ'
  ಭವಿಷ್ಯತ್‌ಕಾಲ – 'ಉವ'

**ಓ) ಈ ಕೆಳಗಿನ ವಾಕ್ಯಗಳನ್ನು ಸೂಚನೆಯಂತೆ ಬದಲಾಯಿಸಿ ಬರೆಯಿರಿ:**

| |
|---|
| ಅಣ್ಣ ಹೂವನ್ನು ತಂದನು. (ವರ್ತಮಾನ ಕಾಲ) |
| |
| ಇಂದು ಸಂಜೆ ಮಳೆ ಬರುವುದು. (ಭೂತಕಾಲ) |
| |
| ಹುಡುಗರು ಊಟ ಮಾಡಿದರು. (ಭವಿಷ್ಯತ್ ಕಾಲ) |
| |
| ಗುರುಗಳು ಶಾಲೆಗೆ ಬರುತ್ತಿದ್ದಾರೆ. (ಭೂತಕಾಲ) |
| |
| ರಹೀಮ ಪಾಠ ಬರೆಯುತ್ತಿದ್ದಾನೆ. (ಭವಿಷ್ಯತ್‌ಕಾಲ) |
| |
| ಅಪ್ಪ ಅಡುಗೆ ಮಾಡುವನು. (ವರ್ತಮಾನಕಾಲ) |
| |
| ಮಕ್ಕಳ ಬೆಳವಣಿಗೆ ಕಂಡು ಪೋಷಕರು ಸಂತಸಪಡುವರು. (ಭೂತಕಾಲ) |
| |
| ತಂಗಿ ಹಾಡನ್ನು ಹಾಡುತ್ತಿದ್ದಾಳೆ. (ಭವಿಷ್ಯತ್‌ಕಾಲ) |
| |

@KTBS NOT TO BE REPUBLISHED

| |
|---|
| ದನಗಳು ತೋಟಕ್ಕೆ ಬಂದವು, (ವರ್ತಮಾನಕಾಲ) |
| |
| ತಂದೆ ಬೆಂಗಳೂರಿಗೆ ಹೋದರು, (ವರ್ತಮಾನಕಾಲ) |
| |
| ಜನರೆಲ್ಲಾ ಊರ ಮುಂದೆ ಸೇರಿದರು. (ಭವಿಷ್ಯತ್‌ಕಾಲ) |
| |

**ಔ) ಈ ಕೆಳಗಿನ ಅಪೂರ್ಣ ವಾಕ್ಯಗಳನ್ನು ಸೂಕ್ತ ವಿಭಕ್ತಿ ಪ್ರತ್ಯಯದೊಡನೆ ಪೂರ್ಣಗೊಳಿಸಿ.**

**ಮಾದರಿ:** 1) ಪ್ರಕಾಶ........ ಹಣ್ಣು........ ತಿಂದ........ ಪ್ರಕಾಶನು ಹಣ್ಣನ್ನು ತಿಂದನು.

| | |
|---|---|
| ೧. ರಹೀಮ........ ಶಾಲೆ........ ಬಂದ........ | |
| ೨. ಸುಶೀಲ........ ನೀರು........ ತಂದ........ | |
| ೩. ಪ್ರಾಣಿ........ ಆಹಾರ........ ಹುಡುಕು........ | |
| ೪. ಅರಸ........ ಅರಮನೆ........ ಹೊರಬಂದ........ | |
| ೫. ಮಂಗ........ ಮರ........ ಹತ್ತು........ | |

**ಅಂ) ಈ ಕೆಳಗಿನ ವಾಕ್ಯ ವೃಂದ / ಪರಿಚ್ಛೇದವನ್ನು ಓದುತ್ತಾ ಖಾಲಿಸ್ಥಳದಲ್ಲಿ ಸೂಕ್ತ ವಿಭಕ್ತಿ ಪ್ರತ್ಯಯವನ್ನು ತುಂಬಿ, ಅರ್ಥ ಪೂರ್ಣಗೊಳಿಸಿ.**

ಬಹಳ ದಿನ ________ ಮಳೆ ಬೀಳದೆ ಕೆರೆ, ನದಿ, ಹಳ್ಳಗಳೆಲ್ಲಾ ಬರಿದಾಗಿವೆ. ದನ–ಕರು ________ ಕುಡಿಯ ________ ನೀರಿಲ್ಲ, ಊರಿನ ________ ರುವ ಬಾವಿಗಳು ಬತ್ತಿಹೋಗಿವೆ. ರೈತರ ಹೊಲ ಗದ್ದೆಗಳ ________ನ ಬೆಳೆಗ ______ ಒಣಗಿವೆ. ಬರಗಾಲದ ಪರಿಣಾಮ ಜನರೆಲ್ಲಾ ನಗರ ________ ಕಡೆ ಹೊರಟಿದ್ದಾರೆ. ರೈತರ ದನಕರು ________ ಸರಕಾರ ಗೋಶಾಲೆ ________ ತೆರೆದು. ಹುಲ್ಲ ________ ಕುಡಿಯ ________ ನೀರ ________ ಒದಗಿಸಿದೆ. ಜನ ________ ಗಂಜಿಕೇಂದ್ರ ________ ತೆರೆದಿದ್ದಾರೆ. ಇದ________ ಜನರಿಗೆ ತುಂಬಾ ಸಂತೋಷವಾಯಿತು. ಬರಗಾಲ ಮತ್ತೆ ಬರಬಾರದೆಂದು ದೇವರನ್ನು ಪ್ರಾರ್ಥಿಸಿದರು. ಕೆರೆ ಕಟ್ಟೆ________ ನೀರ____ ತುಂಬಿಸಿ, ಅಂತರ್ಜಲ ಮಟ್ಟ ________ ಹೆಚ್ಚಿಸಿದರು. ಅಂತರ್ಜಲ ________ ವರ್ಷವಿಡೀ ನೀರು ರೈತರಿಗೆ ದೊರೆಯುವಂತಾಯಿತು.

© KTBS NOT TO BE REPUBLISHED

ಅಃ) ಈ ಕೆಳಗಿನ ನಾಮಪದಗಳ ಜೊತೆಗಿರುವ ವಿಭಕ್ತಿ ಪ್ರತ್ಯಯವನ್ನು ಬಿಡಿಸಿ ಬರೆಯಿರಿ.

| | | | |
|---|---|---|---|
| ಮನೆಯ | | ವಾಹನಕ್ಕೆ | |
| ದಾರಿಯಿಂದ | | ಕುಮುದಳದೆಸೆಯಿಂದ | |
| ಶಾಲೆಯು | | ಪುಸ್ತಕದಲ್ಲಿ | |
| ವಿದ್ಯಾರ್ಥಿಯನ್ನು | | | |

ಕ) ಗುಂಪಿಗೆ ಸೇರದ ವಿಭಕ್ತಿ ಪ್ರತ್ಯಯ ಇರುವ ಪದವನ್ನು ಆರಿಸಿ ಬರೆಯಿರಿ.

| | | | |
|---|---|---|---|
| ಮರವನ್ನು | ಮರದಲ್ಲಿ | ಹೂವನ್ನು | ಕಂಚಿಯನ್ನು |
| ಉತ್ತರ: | | | |
| ಶಾಲೆಗೆ, | ಶಾಲೆಯಿಂದ, | ಮನೆಗೆ, | ಆಟಕ್ಕೆ |
| ಉತ್ತರ: | | | |
| ಮಳೆಯ ದೆಸೆಯಿಂದ, | ಮನೆಯಿಂದ, | ಹೂವಿನಿಂದ, | ಪುಸ್ತಕದಿಂದ |
| ಉತ್ತರ: | | | |
| ಪ್ರಾಣಿಯು, | ಮಕ್ಕಳು, | ರಹೀಮನು, | ಪ್ರಕಾಶನ |
| ಉತ್ತರ: | | | |
| ನದಿಯಲ್ಲಿ, | ತೆರೆಯ, | ಕೊಳದಲ್ಲಿ, | ಸಮುದ್ರದಲ್ಲಿ |
| ಉತ್ತರ: | | | |

©KTBS NOT TO BE REPUBLISHED

ಖ) ತೃತೀಯ ವಿಭಕ್ತಿ ಪದಗಳನ್ನು ಚತುರ್ಥಿ ವಿಭಕ್ತಿಗೆ ಬದಲಿಸಿ ಬರೆಯಿರಿ.

| | | | |
|---|---|---|---|
| ಬಸ್ಸಿನಿಂದ | | ಮರದಿಂದ | |
| ಶಾಲೆಯಿಂದ | | ಮಕ್ಕಳಿಂದ | |
| ಕಣ್ಣಿನಿಂದ | | ಗುರುವಿನಿಂದ | |

**ಗ) ಈ ಕೆಳಗಿನ ಪ್ರತ್ಯಯಗಳನ್ನು ಗುರುತಿಸಿ ವಿಭಕ್ತಿ ಹೆಸರು ಬರೆಯಿರಿ.**

| | |
|---|---|
| 'ಅಲ್ಲಿ' ವಿಭಕ್ತಿ ಹೆಸರು | |
| 'ದೆಸೆಯಿಂದ' ವಿಭಕ್ತಿ ಹೆಸರು | |
| 'ಅ' ವಿಭಕ್ತಿ ಹೆಸರು | |
| 'ಉ' ವಿಭಕ್ತಿ ಹೆಸರು | |
| 'ಗೆ, ಕ್ಕೆ' ವಿಭಕ್ತಿ ಹೆಸರು | |
| 'ಅನ್ನು' ವಿಭಕ್ತಿ ಹೆಸರು | |
| 'ಇಂದ' ವಿಭಕ್ತಿ ಹೆಸರು | |

**ಘ) ಲಿಂಗಗಳ ಬಗ್ಗೆ ತಿಳಿಯಿರಿ.**

'ಗಂಡಸು' ಎಂಬ ಅರ್ಥ ನೀಡುವ ಪದಗಳನ್ನು ಪುಲ್ಲಿಂಗ ಎನ್ನುವರು.

'ಹೆಂಗಸು' ಎಂಬ ಅರ್ಥ ನೀಡುವ ಪದಗಳನ್ನು ಸ್ತ್ರೀಲಿಂಗ ಎನ್ನುವರು.

'ಗಂಡಸು' ಅಥವಾ 'ಹೆಂಗಸು' ಎಂಬ ಅರ್ಥವನ್ನು ನೀಡದ ಪದಗಳನ್ನು ನಪುಂಸಕಲಿಂಗ ಎನ್ನುವರು.

NOT TO BE REPUBLISHED @KTBS

**ಚ) ಗುಂಪಿನಲ್ಲಿರುವ ಪದಗಳನ್ನು ಸೂಚನೆಗನುಸಾರವಾಗಿ ವರ್ಗೀಕರಿಸಿ ಬರೆಯಿರಿ.**

[ಗಣೇಶ, ಕುದುರೆ, ರಾಗಿಣಿ, ರಮ್ಯ, ಶ್ರುತಿ, ಕತ್ತೆ, ಕಿವಿ, ಪೀಟರ್, ಯಾಸಿನ್, ಮೇರಿ, ನವಿಲು, ಪಾರಿವಾಳ, ಡಯನಾ, ಅಮೀರ್, ವಿಶ್ವಾಸ್, ಮೊಲ, ರಾಧ, ನಾಯಿ.]

| ಸ್ತ್ರೀಲಿಂಗ | ಪುಲ್ಲಿಂಗ | ನಪುಂಸಕಲಿಂಗ |
|---|---|---|
| | | |
| | | |
| | | |
| | | |
| | | |

# 8. ಅಭ್ಯಾಸ

**ಅ) ಈ ಪಾತ್ರೆಯಲ್ಲಿರುವ ಪದಗಳನ್ನು ಉಪಯೋಗಿಸಿ ಅರ್ಥಪೂರ್ಣ ವಾಕ್ಯಗಳನ್ನು ರಚಿಸಿ.**




@KTBS NOT TO BE REPUBLISHED

| |
|---|
| **ಮಾದರಿ :** ಶ್ರೀಗಂಧದಿಂದ ಕೂಡಿದ ಸುಂದರ ಕರ್ನಾಟಕ ನಮ್ಮ ರಾಜ್ಯ. |
| |
| |
| |
| |
| |
| |
| |
| |
| |

ಆ) ಈ ಕೆಳಗಿನ ಪದಗಳನ್ನು ಸರಿಯಾಗಿ ಜೋಡಿಸಿ ಅರ್ಥಪೂರ್ಣ ವಾಕ್ಯಗಳನ್ನು ಮಾಡಿ.

| |
|---|
| ಅತ್ಯಂತ / ಕನ್ನಡ / ನಮ್ಮ / ನಾಡು / ಸುಂದರವಾಗಿದೆ. |
| |

| |
|---|
| ಜಗತ್ಪ್ರಸಿದ್ಧ / ಸುಂದರವಾಗಿದೆ / ಮೈಸೂರ / ಅರಮನೆ |
| |

| |
|---|
| ಆಟ / ಮೈದಾನದಲ್ಲಿ / ಆಡುತ್ತಿದ್ದಾರೆ / ಮಕ್ಕಳು / ಭಾನುವಾರದಂದು |
| |

| |
|---|
| ಹೆಮ್ಮೆಯ / ರಾಜಧಾನಿ / ಬೆಂಗಳೂರು / ಕರ್ನಾಟಕ / ರಾಜ್ಯದ / ನಮ್ಮ |
| |

| |
|---|
| ಸತ್ಯದ ಮಾತು / ಶಾಲೆ / ಮೊದಲ / ಪಾಠ / ಮನೆಯೇ / ಎಂಬುದು |
| |

@KTBS NOT TO BE REPUBLISHED

ಇ) ಕೆಳಗೆ ಕೊಟ್ಟಿರುವ ಸಸ್ಯಗಳಿಗೆ ಸಂಬಂಧಿಸಿದ ಪದಗಳಿಗೆ ಮತ್ತು ನೀರಿಗೆ ಸಂಬಂಧಿಸಿದ ಪದಗಳಿಗೆ ' ' ಸೂಕ್ತ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿ, ಇವುಗಳನ್ನು ಅಕಾರಾದಿ ಕ್ರಮದಲ್ಲಿ ಜೋಡಿಸಿ.

| | | | | | |
|---|---|---|---|---|---|
| ಚಿಗುರು | ಬಳ್ಳಿ | ಪ್ರವಾಹ | ತೆಂಗು | ಕಣಿವೆ | ಭತ್ತ |
| ಬಾವಿ | ಬೇರು | ನದಿ | ಸೊಪ್ಪು | ಹೊಲ | ಕಡಲು |
| ಗದ್ದೆ | ಗರಿಕೆ | ನಲ್ಲಿ | ರೆಂಬೆ | ಹೊಂಡ | ಮಲ್ಲಿಗೆ |
| ತಳಿರು | ಕೊಳ | ಪತ್ರೆ | ಹಳ್ಳ | ಕಾಂಡ | ಹೊಳೆ |
| ಎಲೆ | ಸರೋವರ | ಜಲಪಾತ | ಹೂವು | ಅಣೆಕಟ್ಟು | ನಳ |

| | | | | | |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |

**ಈ) ಈ ಕೆಳಗಿನ ಪದಗಳನ್ನು ಅರ್ಥಪೂರ್ಣವಾಗಿ ಸೇರಿಸಿ ಪ್ರಶ್ನೆಗಳನ್ನು ರಚಿಸಿ ಅನಂತರ ಉತ್ತರಿಸಿರಿ.**

ಮನೆಯ / ಏನನ್ನು / ಹಸು / ಕೊಡುತ್ತದೆ? / ರಮೇಶನ

**ಪ್ರಶ್ನೆ:**

ಉತ್ತರ:

ದೇಶದ / ಯಾವುದು? / ರಾಷ್ಟ್ರಪಕ್ಷಿ / ನಮ್ಮ /

**ಪ್ರಶ್ನೆ:**

ಉತ್ತರ:

ಯಾವುದು? / ದೇಶದ / ನಮ್ಮ / ರಾಜಧಾನಿ

**ಪ್ರಶ್ನೆ:**

ಉತ್ತರ:

ಮನೆಗೆ / ಹೆಸರು / ಏನು? / ನಿನ್ನ / ಗೆಳೆಯನ / ನಿಮ್ಮ / ಬಂದಿದ್ದ

**ಪ್ರಶ್ನೆ:**

ಉತ್ತರ:

ನೀನು / ಹೆಸರು / ಶಾಲೆಯ / ಏನು? / ಓದುತ್ತಿರುವ

**ಪ್ರಶ್ನೆ:**

ಉತ್ತರ:

ನೀನು / ಯಾವುದು? / ಊರು / ಹುಟ್ಟಿದ

**ಪ್ರಶ್ನೆ:**

ಉತ್ತರ:

@KTBS NOT TO BE REPUBLISHED

**ಉ) ಕೆಳಗಿನ ವಾಕ್ಯಗಳಲ್ಲಿ ಕರ್ತೃ, ಕರ್ಮ, ಕ್ರಿಯಾಪದಗಳನ್ನು ಆಯ್ದು ಬರೆಯಿರಿ.**

| ಚಂದನ ಪತ್ರವನ್ನು ಸುಂದರವಾಗಿ ಬರೆದಿದ್ದಾಳೆ. (ಸರಳವಾಕ್ಯ) | | |
|---|---|---|
| ಕರ್ತೃ | ಕರ್ಮ | ಕ್ರಿಯಾ |
| | | |
| ವಿದ್ಯಾರ್ಥಿಗಳು ಮೈದಾನದಲ್ಲಿ ಆಟವನ್ನು ಆಡುವರು. | | |
| ಕರ್ತೃ | ಕರ್ಮ | ಕ್ರಿಯಾ |
| | | |
| ಅಣ್ಣನು ಕೈತೋಟದಿಂದ ಹೂಗಳನ್ನು ತಂದನು. | | |
| ಕರ್ತೃ | ಕರ್ಮ | ಕ್ರಿಯಾ |
| | | |
| ಡಿ.ವಿ.ಗುಂಡಪ್ಪನವರು ಮಂಕುತಿಮ್ಮನ ಕಗ್ಗ ಎಂಬ ಕೃತಿ ಬರೆದಿದ್ದಾರೆ. | | |
| ಕರ್ತೃ | ಕರ್ಮ | ಕ್ರಿಯಾ |
| | | |

ಸೂಚನೆ: ಕರ್ತೃ, ಕರ್ಮ, ಕ್ರಿಯಾ ಪದಗಳಿಂದ ಕೂಡಿದ ಅರ್ಥಪೂರ್ಣವಾಕ್ಯವೇ 'ಸರಳವಾಕ್ಯ'.

@KTBS NOT TO BE REPUBLISHED

**ಊ) ಈ ಕೆಳಗೆ ನೀಡಿರುವ ಪ್ರಾಣಿಗಳ ಬಗ್ಗೆ ನಿಮಗನಿಸಿದ್ದನ್ನು ಬರೆಯಿರಿ.**

| ನಾಯಿ : |
|---|
| |
| |
| |
| |
| |
| |

| |
|---|
| **ಹಸು :** |
| |
| |
| |
| |
| |
| **ಆನೆ :** |
| |
| |
| |
| |
| |

@KTBS NOT TO BE REPUBLISHED

**ಖ) ಈ ಕೆಳಗಿನ ಎರಡೂ ವಾಕ್ಯಗಳನ್ನು ಸೇರಿಸಿ ಒಂದೇ ವಾಕ್ಯ ಮಾಡಿ ಬರೆಯಿರಿ. (ಸಂಯೋಜಿತ ವಾಕ್ಯ)**

| |
|---|
| ೧. ನಿನ್ನೆಯ ದಿನ ನಮ್ಮ ಊರಿನಲ್ಲಿ ಮಳೆ ಬಂದಿತು. |
| ೨. ಇದ್ದಕ್ಕಿದ್ದಂತೆ ನದಿ ತುಂಬಿ ಹರಿಯಿತು. |
| **ಸಂಯೋಜಿತ ವಾಕ್ಯ:** |
| ೧) ರಾಮನ ಯಜ್ಞದ ಕುದುರೆಯನ್ನು ಲವನು ಕಟ್ಟಿಹಾಕಿದನು. |
| ೨) ಇವರಿಬ್ಬರ ನಡುವೆ ಘೋರವಾದ ಯುದ್ಧ ನಡೆಯಿತು. |
| **ಸಂಯೋಜಿತ ವಾಕ್ಯ:** |

| |
|---|
| ೧) ಬಾಲ್ಯದಿಂದಲೂ ರವಿಯ ಗೆಳೆಯ ರಾಜು. |
| ೨) ರಾಜುವಿಗೆ ಇರುವ ಒಬ್ಬನೇ ಬಾಲ್ಯದ ಗೆಳೆಯ ರವಿ. |
| **ಸಂಯೋಜಿತ ವಾಕ್ಯ:** |
| ೧) ಕುವೆಂಪು ಅವರು ರಾಮಾಯಣದರ್ಶನಂ ಮಹಾಕಾವ್ಯವನ್ನು ಬರೆದಿದ್ದಾರೆ. |
| ೨) ಕುವೆಂಪು ಅವರು ಕಾದಂಬರಿಯನ್ನೂ ಬರೆದಿದ್ದಾರೆ. |
| **ಸಂಯೋಜಿತ ವಾಕ್ಯ:** |
| ೧) ಕುಮುದ ಆಟದ ಮೈದಾನದಲ್ಲಿ ಓಡುವಾಗ ಎಡವಿ ಬಿದ್ದಳು. |
| ೨) ಇದನ್ನು ನೋಡಿದ ರಾಮು ಕೈಹಿಡಿದು ಮೇಲೆತ್ತಿದನು. |
| **ಸಂಯೋಜಿತ ವಾಕ್ಯ:** |

**ಸೂಚನೆ:** ನಾವು ಎರಡೂ ವಾಕ್ಯ ಕೂಡಿಸಿ ಒಂದೇ ವಾಕ್ಯ ಮಾಡುವಾಗ 'ಆದ್ದರಿಂದ', 'ಆದುದರಿಂದ', 'ಮತ್ತು' 'ಹಾಗೂ', 'ಕೂಡಲೇ' – ಎಂಬ ಪದ ಬಳಸಿದ್ದೀವೆಯಲ್ಲವೆ? ಈ ರೀತಿ ರಚಿಸಿದ ವಾಕ್ಯಗಳೇ **ಸಂಯೋಜಿತ ವಾಕ್ಯ.**

@KTBS NOT TO BE REPUBLISHED

**ಎ) ಈ ಕೆಳಗಿನ ಪದ್ಯವನ್ನು ಓದಿ, ಸಾರಾಂಶವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.**

ಓದಿನಿಂದ ವಿಕಾಸ, ಓದಿನಿಂದಲೆ ಶಾಂತಿ
ಓದು ಅರಿವಿಗೆ ದಾರಿ, ದಿವ್ಯತೆಗೆ ಕೊಂಡಿ.
ಈ ಬಾಳ ಕ್ಲಿಷ್ಟತೆಗೆ ಪರಿಹಾರ ಓದುವಿಕೆ
ಅಧ್ಯಯನ ಪರಮ ಗುಣ – ಮುದ್ದುರಾಮ.

**ಏ) ಈ ಕೆಳಗಿನ ಪದಗಳ ಗುಂಪನ್ನು ಕ್ರಮವಾಗಿ ಜೋಡಿಸಿ ಅರ್ಥಪೂರ್ಣ ವಾಕ್ಯ ಮಾಡಿ. (ಮಿಶ್ರವಾಕ್ಯ)**

| | |
|---|---|
| **ಮಾದರಿ:** | ಜಲಜ ಗಾಯನ ಸ್ಪರ್ಧೆಯಲ್ಲಿ ಗೆದ್ದಳಾದರೂ |
| | ಆಕೆ ತುಂಬಾ ನೊಂದುಕೊಂಡಳು. |
| | ಅವಳಿಗೆ ಬಹುಮಾನ ಸ್ವೀಕರಿಸಲು ಸಾಧ್ಯವಾಗದಿದ್ದಾಗ |
| **ಮಿಶ್ರವಾಕ್ಯ :** | ಜಲಜ ಗಾಯನ ಸ್ಪರ್ಧೆಯಲ್ಲಿ ಗೆದ್ದಳಾದರೂ ಅವಳಿಗೆ ಬಹುಮಾನ ಸ್ವೀಕರಿಸಲು ಸಾಧ್ಯವಾಗದಿದ್ದಾಗ ಆಕೆ ತುಂಬಾ ನೊಂದುಕೊಂಡಳು. |

| | |
|---|---|
| ಅ. | ಅವರಿಗೆ ತುಂಬಾ ಬೇಸರವಾಗುತ್ತದೆ. |
| | ತಂದೆ–ತಾಯಿ ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ತಮ್ಮ ಮಕ್ಕಳನ್ನು |
| | ಉತ್ತಮ ಶಾಲೆಗೆ ಸೇರಿಸುವರಾದರೂ |
| | ಅವರು ಕಲಿಯದಿದ್ದಾಗ |
| **ಮಿಶ್ರವಾಕ್ಯ :** | ________________________________ |

| | |
|---|---|
| ಆ. | ಬರಗಾಲ ಉಂಟಾಗುತ್ತದೆ. |
| | ಜನರು ತಮ್ಮ ದುರಾಸೆಗೆ ಅರಣ್ಯ ನಾಶ ಮಾಡುವರು. |
| | ಅದರ ಪರಿಣಾಮ ಎಲ್ಲಾ ಜೀವಿಗಳ ಮೇಲಾಗಿ ಅನ್ನ, ಆಹಾರ, ಹುಲ್ಲು ಸಿಗದೆ ಬಳಲುವಂತಾಗಿ. |
| **ಮಿಶ್ರವಾಕ್ಯ :** | ________________________________ |

@KTBS NOT TO BE REPUBLISHED

| | |
|---|---|
| ಇ. | ರೈತ ಹಗಲು ರಾತ್ರಿ ದುಡಿದು |
| | ಆತನ ಆರೋಗ್ಯ ಕೈ ಕೊಟ್ಟು |
| | ಇಳಿವಯಸ್ಸಿನಲ್ಲಿ ಸುಖಜೀವನ ನಡೆಸಲಾಗಿಲ್ಲ |
| **ಮಿಶ್ರವಾಕ್ಯ :** ______ | |

| | |
|---|---|
| ಈ. | ಸಾಹಿತ್ಯ ಸಾಧನೆ ಗುರುತಿಸಿ |
| | ಸನ್ಮಾನಕ್ಕೆ ಆಯ್ಕೆ ಮಾಡಿ ಆಹ್ವಾನಿಸಲಾಗಿದೆ ಎಂದು ಬೆಂಗಳೂರಿಗೆ ತೆರಳಿದರು. |
| | ನಮ್ಮೂರಿನ ಯುವ ಕವಿಯೊಬ್ಬರು |
| **ಮಿಶ್ರವಾಕ್ಯ :** ______ | |

@KTBS NOT TO BE REPUBLISHED

**ಸೂಚನೆ:** ಹೀಗೆ ಅನೇಕ ಉಪ ವಾಕ್ಯಗಳು ಒಂದು ಪ್ರಧಾನ ವಾಕ್ಯವನ್ನು ಅವಲಂಬಿಸಿದ್ದರೆ, ಅದೇ **ಮಿಶ್ರ ವಾಕ್ಯ.**

**ಐ) ಕೊಟ್ಟಿರುವ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

| | |
|---|---|
| 1. ಕಾಡು | : |
| 2. ಸೂರ್ಯ | : |
| 3. ಭೂಮಿ | : |
| 4. ಆಕಾಶ | : |
| 5. ಸಾಗರ | : |
| 6. ರಾಜ | : |

**ಒ) ಸೂಚನೆಗನುಸಾರವಾಗಿ ಬರೆಯಿರಿ.**

೧. ರಮೇಶ ಹಾಗೂ ರಹೀಮನು ಕೂಡಿ ಪತ್ರ ಬರೆಯುತ್ತಿದ್ದಾರೆ.
ಈ ವಾಕ್ಯಗಳನ್ನು ಎರಡು ಸರಳ ವಾಕ್ಯಗಳನ್ನಾಗಿ ಬರೆಯಿರಿ.

೨. ರೈತರು ದನಗಳನ್ನು ಸಾಕುತ್ತಾರೆ. ರೈತರು ಎಮ್ಮೆಯನ್ನು ಸಾಕುತ್ತಾರೆ.
ಈ ಎರಡೂ ವಾಕ್ಯ ಸೇರಿಸಿ ಸಂಯೋಜಿತ ವಾಕ್ಯ ಮಾಡಿರಿ.

೩. ಕರ್ತೃ ಕರ್ಮ ಕ್ರಿಯಾಪದಗಳು ಸೇರಿದ ಒಂದು ಪೂರ್ಣ ಅರ್ಥ ನೀಡುವ ವಾಕ್ಯವನ್ನು ಎಂತಹ ವಾಕ್ಯ ಎನ್ನುವರು?

೪. ಎರಡು ಪ್ರತ್ಯೇಕವಾಗಿ ಮಾಡಬಹುದಾದ ವಾಕ್ಯಗಳು ಒಂದೇ ವಾಕ್ಯ ಆಗಿದ್ದರೆ ಅಂತಹ ವಾಕ್ಯವನ್ನು ಏನೆಂದು ಕರೆಯುತ್ತಾರೆ?

೫. ಒಂದು ಪ್ರಧಾನ ವಾಕ್ಯಕ್ಕೆ ಅನೇಕ ಅಧೀನ ವಾಕ್ಯ ವೃಂದಗಳು ಸೇರಿ ವಾಕ್ಯವಾಗಿದ್ದಲ್ಲಿ ಅದು ಎಂತಹ ವಾಕ್ಯ?

@KTBS NOT TO BE REPUBLISHED

**ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ**

| ಕ್ರ.ಸಂ | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1. | ಪದ್ಯ/ಕವನಗಳ ಸ್ವಾರಸ್ಯವನ್ನು ಗ್ರಹಿಸಿ ಬರೆಯುವೆ. | | | |
| 2. | ಭಾಷಾ ನಿಯಮಗಳಂತೆ ಸಂಯೋಜಿತ ವಾಕ್ಯಗಳನ್ನು ರಚಿಸುವೆ. | | | |
| 3. | ವ್ಯಾಕರಣ ಅಂಶಗಳಾದ ಕರ್ತೃ, ಕರ್ಮ, ಕ್ರಿಯಾಪದಗಳನ್ನು ಗುರುತಿಸುವೆ. | | | |
| 4. | ವಿಭಕ್ತಿ ಪ್ರತ್ಯಯಗಳನ್ನು ವಾಕ್ಯದಲ್ಲಿ ಗುರುತಿಸಿ ಬರೆಯುವೆ. | | | |

| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|---|---|

* * *

# 9. ಘಟಕ ಪರೀಕ್ಷೆ–3

**1. ಈ ಕೆಳಗಿನ ಸಂಖ್ಯೆಗಳನ್ನು ಅಕ್ಷರದಲ್ಲಿ ಬರೆಯಿರಿ.**

1. 711 = ____________________
2. 806 = ____________________
3. 996 = ____________________
4. 725 = ____________________
5. 3027 = ____________________

**2. ಈ ಕೆಳಗಿನ ಪದಗಳನ್ನು ನಾಮಪದವಾಗಿ ಒಮ್ಮೆ, ಕ್ರಿಯಾಪದವಾಗಿ ಒಮ್ಮೆ ಬಳಸಿಕೊಂಡು ವಾಕ್ಯ ರಚಿಸಿರಿ.**

1. ಬೆಳಗು 1. ____________________
   2. ____________________
2. ಹೊಳೆ 1. ____________________
   2. ____________________
3. ಕಾಡು 1. ____________________
   2. ____________________

**3. ಈ ಕೆಳಗಿನ ವಾಕ್ಯಗಳನ್ನು ಸೂಚನೆಯನುಸಾರ ಕಾಲವನ್ನು ಬದಲಿಸಿ ಬರೆಯಿರಿ.**

1. ವಿದ್ಯಾರ್ಥಿಗಳು ಹಾಡನ್ನು ಹಾಡಿದರು. (ವರ್ತಮಾನಕಾಲದಲ್ಲಿ ಬರೆದಾಗ)
   ಉತ್ತರ: ____________________
2. ಇಂದು ಅಕ್ಕ ನಮ್ಮ ಮನೆಗೆ ಬರುವಳು. (ಭೂತಕಾಲದಲ್ಲಿ ಬರೆದಾಗ)
   ಉತ್ತರ: ____________________
3. ವಿದ್ಯಾರ್ಥಿಗಳು ಪಾಠವನ್ನು ಓದುತ್ತಾರೆ. (ಭವಿಷ್ಯತ್ ಕಾಲದಲ್ಲಿ ಬರೆದಾಗ)
   ಉತ್ತರ: ____________________
4. ದನ–ಕರುಗಳು ತೋಟಕ್ಕೆ ಬಂದವು. (ಭವಿಷ್ಯತ್ ಕಾಲದಲ್ಲಿ ಬರೆದಾಗ)
   ಉತ್ತರ: ____________________

**4. ಮೊದಲೆರಡು ಪದಗಳಿಗಿರುವ ಸಂಬಂಧದಂತೆ, ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.**

1. ರಾಜನು : ಪ್ರಥಮಾ ವಿಭಕ್ತಿ : : ರಾಜನಿಗೆ : ☐
2. ತಂದೆಗೆ : ಚತುರ್ಥಿ ವಿಭಕ್ತಿ : : ಅಣ್ಣನಿಂದ : ☐
3. ರಾಹುಲ : ಷಷ್ಠಿ ವಿಭಕ್ತಿ : : ರಾಹುಲನ ದೆಸೆಯಿಂದ : ☐
4, ಗಿಡಗಳನ್ನು : ದ್ವಿತೀಯ ವಿಭಕ್ತಿ : : ಮನೆಯ : ☐
5. ಒಂದಕ್ಕೆ : ಚತುರ್ಥಿ ವಿಭಕ್ತಿ : : ಎರಡನ್ನು : ☐

**5. ಈ ಕೆಳಗಿನ ತಪ್ಪುವಾಕ್ಯಗಳನ್ನು ಸರಿಪಡಿಸಿ ಬರೆಯಿರಿ.**

1. ಸರಿತ ಹೂವನ್ನು ತಂದನು. ____________________
2. ಇಂದು ಸಂಜೆ ಮಳೆಬಂದನು. ____________________
3. ಆಗಸದಲ್ಲಿ ಮೋಡಗಳು ತೇಲುತ್ತಿದ್ದಾಳೆ. ____________________
4. ಗಣೇಶ ಶಾಲೆಗೆ ಬಂದಿತು. ____________________
5. ಹಸೀನಾ ಆಟವಾಡಿದನು. ____________________

| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|---|---|

* * *

NOT TO BE REPUBLISHED ©KTBS

# 10. ಅಭ್ಯಾಸ

ಅ) ಈ ಚಿತ್ರವನ್ನು ಗಮನಿಸಿ ಹಿಂದಿನ ಕಥೆ ಏನಾಗಿರಬಹುದು...? ಎಂದು ಯೋಚಿಸಿ ಬರೆಯಿರಿ.



@KTBS NOT TO BE REPUBLISHED

ಆ) ಈ ಎರಡೂ ಚಿತ್ರಗಳನ್ನು ಗಮನಿಸಿ, ಎರಡಕ್ಕೂ ಸಂಬಂಧ ಕಲ್ಪಿಸಿ ಬರೆಯಿರಿ.





@KTBS
NOT TO BE REPUBLISHED

## ಇ) ಲೇಖನ ಚಿಹ್ನೆಗಳ ಬಗ್ಗೆ ತಿಳಿಯಿರಿ.

ಬರವಣಿಗೆಯಲ್ಲಿ ಲೇಖನ ಚಿಹ್ನೆಗಳ ಪಾತ್ರ ಅತ್ಯಂತ ಮುಖ್ಯವಾದದ್ದು, ಲೇಖನ ಚಿಹ್ನೆಗಳಿಲ್ಲದ ಬರವಣಿಗೆ ಸ್ಪಷ್ಟಾರ್ಥವನ್ನು ಕೊಡದೆ ತೊಡರುಗಳಿಗೆ ಕಾರಣವಾಗುವುದುಂಟು. ಹಾಗಾಗಿ ಲೇಖನ ಚಿಹ್ನೆಗಳು ಅತ್ಯಂತ ಅಗತ್ಯ. ಇಲ್ಲಿ ಕೊಟ್ಟಿರುವ ವಿವರಗಳನ್ನು ಗಮನಿಸೋಣ.

1. **ಪೂರ್ಣವಿರಾಮ (.):** ಒಂದು ಪೂರ್ಣ ಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಈ ಪೂರ್ಣ ವಿರಾಮ ಚಿಹ್ನೆಯನ್ನು ಬಳಸಬೇಕು.

   ಉದಾ: ವಿದ್ಯಾರ್ಥಿಗಳು ಪದ್ಯವನ್ನು ಹಾಡುತ್ತಾರೆ.

2. **ಅರ್ಧವಿರಾಮ (;):** ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು.

3. **ಅಲ್ಪವಿರಾಮ (,):** ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾ ಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬರುವಾಗ ಕೊನೆಯ ವಿಶೇಷಣ ಬಿಟ್ಟು ಉಳಿದವುಗಳ ಮುಂದೆ ಅಲ್ಪವಿರಾಮ ಬಳಸಬೇಕು.

   ಉದಾ: ಬಟ್ಟೆಗಿರಣಿ, ರಟ್ಟು, ಪೆನ್ಸಿಲ್, ಬೆಂಕಿಕಡ್ಡಿ ತಯಾರಿಕಾ ಘಟಕಗಳನ್ನು ಸ್ಥಾಪಿಸಲಾಗಿದೆ.

4. **ಪ್ರಶ್ನಾರ್ಥಕ (?):** ಪ್ರಶ್ನೆ ರೂಪದ ಪದ ಮತ್ತು ವಾಕ್ಯಗಳ ಮುಂದೆ ಪ್ರಶ್ನಾರ್ಥಕ ಚಿಹ್ನೆಯನ್ನು ಬಳಸಲಾಗುವುದು.

   ಉದಾ: ಧನಂಜಯ ಯಾರ ಮಗ?

5. **ಭಾವಸೂಚಕ ಚಿಹ್ನೆ (!):** ಹರ್ಷ, ಆಶ್ಚರ್ಯ, ಸಂತೋಷ, ವಿಷಾದ, ದುಃಖ ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ ಈ ಚಿಹ್ನೆಯನ್ನು ಬಳಸಲಾಗುವುದು.

   ಉದಾ: ಅಯ್ಯೋ! ಹೀಗಾಗಬಾರದಿತ್ತು!

6. **ಉದ್ಧರಣ (“ ”):** ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು.

   ಉದಾ: “ಶಿಕ್ಷಣವು ಕೆಲವೇ ಜನರ ಸೊತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು” ಎಂದು ಸರ್.ಎಂ.ವಿಶ್ವೇಶ್ವರಯ್ಯನವರು ಹೇಳಿದರು.

7. **ವಾಕ್ಯ ವೇಷ್ಟನ ಚಿಹ್ನೆ (‘ ’) :** ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆಯ ಪದಗಳನ್ನು ಬಳಸುವಾಗ ಪ್ರಮುಖ ಪದಗಳನ್ನು ಸೂಚಿಸುವಾಗ ಈ ಚಿಹ್ನೆಯನ್ನು ಬಳಸಲಾಗುವುದು.

@KTBS NOT TO BE REPUBLISHED

ಉದಾ: ಕನ್ನಡ ಭಾಷೆಯಲ್ಲಿ 'ಇಂಗ್ಲಿಷ್' 'ಪರ್ಷಿಯನ್' 'ಪೋರ್ಚುಗೀಸ್' ಭಾಷೆಗಳ ಪದಗಳನ್ನು ಬಳಸಲಾಗುತ್ತದೆ.

8. **ಆವರಣ ಚಿಹ್ನೆ ( ):** ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ.

   ಉದಾ: ನೀರನ್ನು ವಿಭಜಿಸಿದರೆ ಆಮ್ಲಜನಕ (ಆಕ್ಸಿಜನ್) ಜಲಜನಕ (ಹೈಡ್ರೋಜನ್)ಗಳು ಉತ್ಪತ್ತಿಯಾಗುತ್ತವೆ.

9. **ವಿವರಣಾತ್ಮಕ ಚಿಹ್ನೆ :–** : ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ.

   ಉದಾ: ಪಂಚ ಮಹಾವಾದ್ಯಗಳು: ತಾಳ, ಹಳಗ, ಗಂಟೆ, ಮೌರಿ, ಸನಾದಿ

**ಈ) ಹೊಂದಿಸಿ ಬರೆಯಿರಿ :**

| | 'ಅ' ಪಟ್ಟಿ | 'ಬ' ಪಟ್ಟಿ | ಉತ್ತರ |
|---|---|---|---|
| 1. | ಪ್ರಶ್ನಾರ್ಥಕ ಚಿಹ್ನೆ | . | |
| 2. | ಉದ್ಧರಣ ಚಿಹ್ನೆ | ? | |
| 3. | ಪೂರ್ಣವಿರಾಮ | ! | |
| 4. | ವಿವರಣಾತ್ಮಕ ಚಿಹ್ನೆ | " " | |
| 5. | ಭಾವಸೂಚಕ ಚಿಹ್ನೆ | :– | |

@KTBS NOT TO BE REPUBLISHED

**ಉ) ಈ ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆ ಹಾಕೋಣ :–**

1. ಮೈಸೂರಿನಲ್ಲಿ ದಸರಾ ಉತ್ಸವ ನಡೆಯುತ್ತಿದೆ
2. ಛೀ ರಸ್ತೆಯಲ್ಲೇ ಕಸ ಎಸೆಯುತ್ತಿದ್ದಾರೆ
3. ನಾಳೆ ಶಾಲೆಗೆ ರಜೆ ಇದೆ  ಎಂದು ಮುಖ್ಯ ಗುರುಗಳು ತಿಳಿಸಿದರು
4. ಆಹಾ ಈ ಹುಡುಗಿ ಎಷ್ಟೊಂದು ಘಾಟಿ
5. ಶಾರುಕ್‌ಖಾನ್ ಇಂದು ಏಕೆ ಶಾಲೆಗೆ ಬರಲಿಲ್ಲ
6. ಕುವೆಂಪುರವರಿಗೆ ಪಂಪ ಪ್ರಶಸ್ತಿ  ರಾಷ್ಟ್ರಕವಿ ಪ್ರಶಸ್ತಿ  ಕರ್ನಾಟಕ ರತ್ನ  ಮುಂತಾದ ಪ್ರಶಸ್ತಿಗಳು ಸಂದಿವೆ

**ಊ) ಈ ಕೆಳಗಿನ ಚಿಹ್ನೆಗಳನ್ನು ಏನೆಂದು ಕರೆಯುವಿರಿ? ಬರೆಯಿರಿ.**

1. ? [ ] ಚಿಹ್ನೆ
2. :– [ ] ಚಿಹ್ನೆ
3. ! [ ] ಚಿಹ್ನೆ
4. “ ” [ ] ಚಿಹ್ನೆ
5. ( ) [ ] ಚಿಹ್ನೆ
6. ; [ ] ಚಿಹ್ನೆ
7. ‘ ’ [ ] ಚಿಹ್ನೆ
8. , [ ] ಚಿಹ್ನೆ
9. . [ ] ಚಿಹ್ನೆ
10. = [ ] ಚಿಹ್ನೆ

**ಋ) ಈ ಕೆಳಗಿನ ಗದ್ಯಭಾಗ ಓದಿ ಅಗತ್ಯ ಇರುವ ಕಡೆ ಸೂಕ್ತ ಲೇಖನ ಚಿಹ್ನೆ ಹಾಕಿರಿ.**

ಪ್ರಸನ್ನ ಕುಮಾರ ನಮ್ಮ ಶಾಲೆಯ ಹಳೆಯ ವಿದ್ಯಾರ್ಥಿ ಈತನನ್ನು ಎಲ್ಲಾ ಗೆಳೆಯರು ಗಾಂಧಿ ಎಂದೇ ಕರೆಯುತ್ತಿದ್ದರು ಪ್ರಸನ್ನ ಕುಮಾರನನ್ನು ಆ ರೀತಿ ಗೆಳೆಯರು ಕರೆಯಲು ಕಾರಣವಿದೆ ಆತ ಮನೆ ಅಂಗಡಿ ಶಾಲೆ ತೋಟ ಎಲ್ಲೇ ಹೋದರೂ ಸ್ವಚ್ಛತೆಗೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಿದ್ದನು ಶಾಲೆಯ ಬಳಿ ಯಾರಾದರೂ ಗಲೀಜು ಮಾಡುವುದನ್ನು ಕಂಡರೆ ನೀವು ಏಕೆ ಇಲ್ಲಿ ಗಲೀಜು ಮಾಡುತ್ತೀರಿ ಇದು ನಮ್ಮ ಶಾಲೆ ಎಂದು ಸ್ವಾಭಿಮಾನದಿಂದ ಕೇಳಿಯೇ ಬಿಡುತ್ತಿದ್ದನು ಆತನಿಗೆ ಸಂಗೀತ ಸಾಹಿತ್ಯ ಚಿತ್ರಕಲೆ ಕ್ರೀಡೆಗಳಲ್ಲಿ ಹೆಚ್ಚು ಆಸಕ್ತಿ ಈತ ಸದಾ ಚಟುವಟಿಕೆ ಇಂದ ಕೂಡಿದ ವಿದ್ಯಾರ್ಥಿಯಾಗಿದ್ದನು ಒಮ್ಮೆ ತನ್ನ ಸಹಪಾಠಿ ಜಾರಿಬಿದ್ದಾಗ ಅಯ್ಯೋ ಎಂದು ಚೀರುತ್ತಾ ಓಡಿ ಆತನನ್ನು ಹಿಡಿದೆತ್ತಿದ್ದನು ಆತನ ಗುಣ ನಡತೆ ಗುರುತಿಸಿ ಶಾಲೆಯ ಮುಖ್ಯಗುರುಗಳು ವಿದ್ಯಾದೀಪ ಪ್ರಶಸ್ತಿ ನೀಡಿ ಗೌರವಿಸಿದ್ದರು.

**ಎ) ಈ ಕೆಳಗಿನ ವಾಕ್ಯಗಳಲ್ಲಿ ಗೆರೆ ಎಳೆದ ಪದವನ್ನು ಬಿಡಿಸಿ ಬರೆಯಿರಿ.**

೧. ಮುರಾರಿ <u>ವಿದ್ಯಾಭ್ಯಾಸ</u> ಮಾಡಲು ಶಾಲೆಗೆ ಸೇರಿದನು. [ ]
೨. <u>ಗಿರೀಶನು</u> ರಾಮಾಯಣವನ್ನು ಓದಿದನು. [ ]
೩. ಹರೀಶ್ವರ <u>ಗುರೂಪದೇಶವನ್ನು</u> ಪಡೆದನು. [ ]
೪. <u>ಗ್ರಂಥಾಲಯದಲ್ಲಿ</u> <u>ಹಳಗನ್ನಡ</u> ಪುಸ್ತಕಗಳಿವೆ. [ ]
೫. <u>ಚಳಿಗಾಲ</u>ದಲ್ಲಿ ಕಂಬಳಿಯ ಅಗತ್ಯವಿದೆ. [ ]
೬. ನಾವು <u>ರಾಜ್ಯೋತ್ಸವ</u>ವನ್ನು ಆಚರಿಸಬೇಕು. [ ]
೭. <u>ದೇವಾಲಯ</u>ದಲ್ಲಿ ಗಂಟೆ ಮೊಳಗಿತು. [ ]

@KTBS NOT TO BE REPUBLISHED

ಏ) **ಕೆಳಗಿನ ಗಾದೆ ಮಾತಿನ ಅರ್ಥ ಗುರುತಿಸಿ ಬರೆಯಿರಿ.**

1. **ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು** – ಈ ಮಾತಿನ ಅರ್ಥ ಇಲ್ಲಿದೆ ಗುರುತಿಸಿ.

   ಅ) ಸದಾ ನಿಂತು ತಿನ್ನಬೇಕು.

   ಆ) ದುಡಿದು ಸಂಪಾದಿಸಿ ತಿನ್ನಬೇಕು.

   ಇ) ಕುಡಿಕೆಯಲ್ಲಿ ಹೊನ್ನು ತುಂಬಿದರೆ ಸಾಲದು.

   ಈ) ಸೋಮಾರಿಗಳಿಗೆ ಎಷ್ಟು ಹಣವಿದ್ದರೂ ಸಾಲದು.

2. **'ದೇಶ ಸುತ್ತು ಕೋಶ ಓದು'** – ಈ ಹೇಳಿಕೆ ಅರ್ಥ ಗುರುತಿಸಿ.

   ಅ) ದೇಶ ಸುತ್ತಾಡುತ್ತಾ ಓದಬೇಕು.

   ಆ) ಓದುತ್ತಾ ದೇಶಾದ್ಯಂತ ಸುತ್ತಾಡಬೇಕು.

   ಇ) ದೇಶವನ್ನೂ ಸುತ್ತಬೇಕು, ಕೋಶವನ್ನೂ ಓದಬೇಕು.

   ಈ) ಜ್ಞಾನ ಮತ್ತು ಅನುಭವಕ್ಕಾಗಿ ದೇಶ ಸುತ್ತಿ ಕೋಶ ಓದಬೇಕು.

3. **"ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೇ?"**

   ಅ) ಗಿಡ–ಮರ ಬಾಗುವುದಿಲ್ಲಾ.

   ಆ) ಮರ–ಗಿಡ ಬಾಗುತ್ತವೆ.

   ಇ) ಬಾಲ್ಯದಲ್ಲಿಯೇ ಒಳ್ಳೆಯ ನಡತೆ ರೂಢಿಸಿಕೊಳ್ಳಬೇಕು.

   ಈ) ಗಿಡವಾಗಿ ಬಾಗದಿದ್ದರೂ ಮರವಾಗಿ ಬಾಗುವುದು.

4. **'ಕುಂಬಾರನಿಗೆ ವರ್ಷ, ದೊಣ್ಣೆಗೆ ನಿಮಿಷ'**

   ಅ) ಕುಂಬಾರ ವರ್ಷವಿಡೀ ದೊಣ್ಣೆ ಹಿಡಿಯುತ್ತಾನೆ.

   ಆ) ಕುಂಬಾರ ವರ್ಷದಲ್ಲಿ ಒಂದು ನಿಮಿಷ ದೊಣ್ಣೆ ಹಿಡಿಯುತ್ತಾನೆ.

   ಇ) ಉತ್ತಮ ಕಾರ್ಯಕ್ಕೆ ಬಹಳ ಕಾಲ ಶ್ರಮಬೇಕು,
   ಹಾಳು ಮಾಡಲು ಕ್ಷಣ ಹೊತ್ತು ಸಾಕು.

   ಈ) ಕುಂಬಾರನಿಗೆ ವರ್ಷಕ್ಕೊಂದು ದೊಣ್ಣೆ ಬೇಕು.

NOT TO BE REPUBLISHED @KTBS

**ಐ. ಇಬ್ಬರೂ ಕೂಡಿ ಸಂಧಿ ಪದ ಆಗೋಣ. ಪ್ರಯತ್ನಿಸಿ ಬರೆಯಿರಿ.**

| | | |
|---|---|---|
|  | + ಅನ್ನು | = |
|  | + ಅಲ್ಲಿ | = |
|  | + ಉದಯ | = |
|  | + ಒಳಗೆ | = |
|  | + ತೊಳೆ | = |
| ರಾಜ + |  | = |

@KTBS
NOT TO BE REPUBLISHED

ಒ) ಕೊಟ್ಟಿರುವ ಪದಗಳನ್ನು ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕಲಿಂಗಗಳಾಗಿ ವರ್ಗೀಕರಿಸಿ.
[ಗಾಂಧೀಜಿ, ಚನ್ನಮ್ಮ, ಸಖೀ, ಅಪ್ಪಾಜಿ, ರಾಣಿ, ವಿಧಿ, ಅಂಬಿಕೆ, ಲೋಕ, ತಂದೆ ಹುಲಿ,ಮಗು ಕನಸು, ಬಾಲಕ, ದೇವ, ತಾತ, ಮಕ್ಕಳು, ಅಣ್ಣ, ಅವ್ವ, ರಾಜ, ಶಿಕ್ಷಕ, ತಪಸ್ವಿ, ಹೂವು]

| ಪುಲ್ಲಿಂಗ | ಸ್ತ್ರೀಲಿಂಗ | ನಪುಂಸಕಲಿಂಗ |
|---|---|---|
| | | |
| | | |
| | | |
| | | |
| | | |
| | | |
| | | |

ಓ) ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ಕರ್ಮ, ಕ್ರಿಯಾ ಹಾಗೂ ಕರ್ತೃಪದಗಳನ್ನು ಆರಿಸಿ ಬರೆಯಿರಿ.

1. ಅಮ್ಮ ಮಾವಿನಹಣ್ಣನ್ನು ತಿಂದಳು.
2. ರಮೇಶನು ಬಸ್ಸಿನಲ್ಲಿ ಪ್ರಯಾಣ ಮಾಡಿದನು.
3. ನಳಿನಾ ಪ್ರತಿ ದಿನವು ಶಾಲೆಗೆ ಹೋಗುತ್ತಿದ್ದಳು.
4. ಕುದುರೆಯು ರಸ್ತೆಯಲ್ಲಿ ವೇಗವಾಗಿ ಓಡುತ್ತಿತ್ತು.
5. ಅಜ್ಜಿಯು ರುಚಿಯಾದ ಕಾಫಿಯನ್ನು ಮಾಡಿಕೊಟ್ಟಳು.

| ಕರ್ಮಪದ | ಕ್ರಿಯಾಪದ | ಕರ್ತೃಪದ |
|---|---|---|
| | | |
| | | |
| | | |
| | | |
| | | |

@KTBS NOT TO BE REPUBLISHED

ಔ) ಈ ಪದಗಳನ್ನು ಕೂಡಿಸಿ ನನ್ನ ಹೆಸರು ತಿಳಿಸಿ?

| | | | | |
|---|---|---|---|---|
| ಗಿರಿ | + | ಈಶ | = | |
| ವಿದ್ಯೆ | + | ಐಶ್ವರ್ಯ | = | |
| ಮಹ | + | ಈಶ | = | |
| ವಾಕ್ | + | ದೇವಿ | = | |
| ಏಕ | + | ಅಕ್ಷ | = | |

ಅಂ) ನಮ್ಮನ್ನು ಅರ್ಥ ಕೆಡದಂತೆ ಬಿಡಿಸಿ ಬೇರೆ ಮಾಡಿ.

| | | | | |
|---|---|---|---|---|
| ಗುರೂಪದೇಶ | = | | + | |
| ವಿದ್ಯಾಭ್ಯಾಸ | = | | + | |
| ಜಗಜ್ಜ್ಯೋತಿ | = | | + | |
| ಮಹಾತ್ಮ | = | | + | |
| ಕೋಟ್ಯಧಿಪತಿ | = | | + | |
| ಮೃಷ್ಟಾನ್ನ | = | | + | |
| ಒಡನಿರ್ದು | = | | + | |
| ಕರೆಯನ್ನು | = | | + | |
| ಪತಿಯೊಡನೆ | = | | + | |

@KTBS NOT TO BE REPUBLISHED

# 11. ಅಭ್ಯಾಸ

**ಅ) ಕನ್ನಡ ಮತ್ತು ಸಂಸ್ಕೃತವೆಂದು ಎರಡು ತಂಡದ ನಾವೆಲ್ಲರೂ ಇಲ್ಲಿದ್ದೇವೆ. ಹುಡುಕಿ ಬೇರೆ ಮಾಡಿ.**

| ಕನ್ನಡ | ಸಂಸ್ಕೃತ |
|---|---|
| 1. ____________ | 1. ____________ |
| 2. ____________ | 2. ____________ |
| 3. ____________ | 3. ____________ |
| | 4. ____________ |
| | 5. ____________ |
| | 6. ____________ |
| | 7. ____________ |




**ಆ) ಪೂರ್ವಪದ ಮತ್ತು ಉತ್ತರ ಪದವೆಂಬ ನಮ್ಮಿಬ್ಬರಲ್ಲಿ ಪೂರ್ವಪದದ ಕೊನೆಯಲ್ಲಿ ಅಡಗಿರುವ "ಸ್ವರ" ಯಾರೆಂದು ತಿಳಿಸು.**

| | | | | | | |
|---|---|---|---|---|---|---|
| 1. | ಬೇರೆ | ☐ | + | ಒಬ್ಬ | = | ಬೇರೊಬ್ಬ |
| 2. | ದೇವರು | ☐ | + | ಇಂದ | = | ದೇವರಿಂದ |
| 3. | ಆಡು | ☐ | + | ಇಸು | = | ಆಡಿಸು |
| 4. | ಊರು | ☐ | + | ಊರು | = | ಊರೂರು |
| 5. | ನಾವು | ☐ | + | ಎಲ್ಲಾ | = | ನಾವೆಲ್ಲಾ |

**ಇ) ನಾವಿಬ್ಬರೂ ಕೂಡಿ ಒಂದು ಪದವಾಗುವಾಗ ಅರ್ಥ ಕೆಡದಂತೆ ನಮ್ಮಿಂದ ದೂರವಾದ 'ಸ್ವರ' ಯಾರೆಂದು ಪತ್ತೆ ಮಾಡಿ ಬರೆಯಿರಿ.**

| | | | |
|---|---|---|---|
| 1. | ಅಲ್ಲಿ + ಅಲ್ಲಿ | = ____________, | ದೂರವಾದ ಸ್ವರ ____________ |
| 2. | ನಾವು + ಎಲ್ಲಾ | = ____________, | ದೂರವಾದ ಸ್ವರ ____________ |
| 3. | ದೇವರು + ಇಂದ | = ____________, | ದೂರವಾದ ಸ್ವರ ____________ |
| 4. | ಬೇರೆ + ಒಬ್ಬ | = ____________, | ದೂರವಾದ ಸ್ವರ ____________ |

NOT TO BE REPUBLISHED @KTBS

**ಈ) ಈ ಕೆಳಗಿರುವ ಸಂಧಿ ಪದಗಳನ್ನು ಬಿಡಿಸಿ. ಲೋಪವಾಗಿರುವ ಸ್ವರ ಗುರುತಿಸಿ ಸಂಧಿ ಹೆಸರು ಬರೆಯಿರಿ. (ಮಾದರಿಯಂತೆ)**

**ಮಾದರಿ:** ಆಡಿಸು = ಆಡು + ಇಸು – 'ಉ' ಕಾರ ಲೋಪಸಂಧಿ

1. ಮಾತಿಲ್ಲಾ = ______
2. ಅವನೂರು = ______
3. ನಿನಗೆಲ್ಲಾ = ______
4. ಊರಲ್ಲಿ = ______
5. ನಿನಗಲ್ಲದೆ = ______

**ಉ) ಪೂರ್ವಪದ ಮತ್ತು ಉತ್ತರ ಪದಗಳ ನಡುವೆ ಬಂದ ವ್ಯಂಜನಾಕ್ಷರ ಯಾವುದೆಂದು ಬರೆಯಿರಿ.**

1. ಮನೆ + ಅಲ್ಲಿ = ಮನೆಯಲ್ಲಿ ______
2. ಕರು + ಅನ್ನು = ಕರುವನ್ನು ______
3. ಶಾಲೆ + ಅಲ್ಲಿ = ಶಾಲೆಯಲ್ಲಿ ______
4. ಮಗು + ಅನ್ನು = ಮಗುವನ್ನು ______
5. ಪುಸ್ತಕ + ಅನ್ನು = ಪುಸ್ತಕವನ್ನು ______

@KTBS NOT TO BE REPUBLISHED

**ಊ) ಪೂರ್ವಪದ ಮತ್ತು ಉತ್ತರ ಪದಗಳ ನಡುವೆ ಬಂದವರಾರು, ಹೋದವರಾರು ಗುರುತಿಸಿ ಬರೆಯಿರಿ.**

1. ಮನೆ + ಕೆಲಸ = ಮನೆಗೆಲಸ — ಬಂದವರು ______ ಹೋದವರು ______
2. ಹಳೆ + ಕನ್ನಡ = ಹಳೆಗನ್ನಡ — ಬಂದವರು ______ ಹೋದವರು ______
3. ಹುಲ್ಲು + ಕಾವಲು = ಹುಲ್ಲುಗಾವಲು — ಬಂದವರು ______ ಹೋದವರು ______
4. ಎಳೆ + ಕರು = ಎಳೆಗರು — ಬಂದವರು ______ ಹೋದವರು ______
5. ಮೈ + ತೊಳೆ = ಮೈದೊಳೆ — ಬಂದವರು ______ ಹೋದವರು ______

ಋ) **ಪೂರ್ವಪದ ಮತ್ತು ಉತ್ತರ ಪದಗಳಾದ ನಮ್ಮ ನಡುವೆ ಸ್ವರ ಬಿಟ್ಟುಹೋದರೆ ಲೋಪಸಂಧಿ ಎಂದು ಬರೆಯಬೇಕು. 'ಯ', 'ವ' ಎಂಬ ವ್ಯಂಜನ ಬಂದರೆ ಆಗಮ ಸಂಧಿ ಎಂದು ಬರೆಯಬೇಕು. ಒಬ್ಬರ ಬದಲಾಗಿ ಮತ್ತೊಂದು ವ್ಯಂಜನ ಬಂದರೆ ಆದೇಶ ಸಂಧಿ ಎಂದು ಬರೆಯಿರಿ.**

| | | | | | | | |
|---|---|---|---|---|---|---|---|
| 1. | ನಮ್ಮ + ಊರು = | | | 4. | ಎಳೆ + ಕರು = | | |
| 2. | ದಾರಿ + ಅಲ್ಲಿ = | | | 5. | ನಾವು + ಎಲ್ಲಾ = | | |
| 3. | ಹೊಲ + ಅನ್ನು = | | | 6. | ಮನೆ + ಕೆಲಸ = | | |

ಎ) **ಪೂರ್ವ ಮತ್ತು ಉತ್ತರ ಪದಗಳಾದ ನಮ್ಮ ನಡುವೆ ಒಂದೇ ಜಾತಿ ಸ್ವರ ಇದೆ. ಅದನ್ನು ಮಾದರಿಯಂತೆ ಗುರುತಿಸಿ ಬರೆಯಿರಿ.**

| | | | | | | | |
|---|---|---|---|---|---|---|---|
| ಮಾದರಿ : | ವಾಚನ + ಆಲಯ | = | ಅ | > | ಆ | = | ವಾಚನಾಲಯ |
| 1. | ಶೌಚ + ಆಲಯ | = | | > | | + | |
| 2. | ಭೋಜನ + ಆಲಯ | = | | > | | + | |
| 3. | ಗಿರಿ + ಈಶ | = | | > | | + | |
| 4. | ಗುರು + ಉಪದೇಶ | = | | > | | + | |
| 5. | ಗ್ರಂಥ + ಆಲಯ | = | | > | | + | |

(ಈ ಮೇಲಿನ ಉದಾಹರಣೆಗಳನ್ನು ಗಮನಿಸು. ಒಂದೇ ಜಾತಿ ಸ್ವರ ಕೂಡಿ ದೀರ್ಘವಾದರೆ ಅದನ್ನು **'ಸವರ್ಣದೀರ್ಘ ಸಂಧಿ'** ಎನ್ನಬೇಕು.)

ಏ) **ಪೂರ್ವ ಪದ ಮತ್ತು ಉತ್ತರ ಪದಗಳಾದ ನಮ್ಮ ನಡುವೆ ಕೆಲವು ಬದಲಾವಣೆಯಾಗುವುದನ್ನು ಮಾದರಿಯ ಸಹಾಯದಿಂದ ಗುರುತಿಸಿ ಬರೆಯಿರಿ.**

**ಮಾದರಿ:** ಗಣ + ಈಶ = ಗಣೇಶ = ಅ + ಈ = ಏ
ಸೂರ್ಯ+ಉದಯ = ಸೂರ್ಯೋದಯ = ಅ + ಉ = ಓ
ರಾಜ + ಋಷಿ = ರಾಜರ್ಷಿ = ಅ + ಋ = ೯ (ಅರ್)

1. ಚಂದ್ರೋದಯ = ________________ + ________________
2. ಮಹರ್ಷಿ = ________________ + ________________
3. ಮಹೇಶ = ________________ + ________________
4. ಜ್ಞಾನೋದಯ = ________________ + ________________
5. ಸುರೇಶ = ________________ + ________________

@KTBS NOT TO BE REPUBLISHED

(ಹೀಗೆ ಪೂರ್ವ ಮತ್ತು ಉತ್ತರ ಪದಗಳ ನಡುವೆ ಅ, ಆ ಜೊತೆಗೆ ಆಗುವ ಬದಲಾವಣೆಯನ್ನೇ **'ಗುಣಸಂಧಿ'** ಎನ್ನುವರು)

**ಐ) ಪೂರ್ವ ಮತ್ತು ಉತ್ತರ ಪದಗಳಾದ ನಮ್ಮ ನಡುವೆ 'ಐ ಮತ್ತು ಔ' ಎಂಬ ಇಬ್ಬರಲ್ಲಿ ಯಾರಾದರೊಬ್ಬರು ಹೊಸದಾಗಿ ಬರುವುದನ್ನು ಮಾದರಿಯ ಸಹಾಯದಿಂದ ಗುರುತಿಸಿ.**

ಮಾದರಿ: ಜಲ + ಓಘ = ಜಲೌಘ (ಔ), ಜನ + ಐಕ್ಯ = ಜನೈಕ್ಯ (ಐ)

1. ವನೌಷಧಿ = ______
2. ಅಷ್ಟೈಶ್ವರ್ಯ = ______
3. ವಿದ್ವೈಶ್ವರ್ಯ = ______
4. ದಿವ್ಯೌಷಧಿ = ______
5. ಜೀವೈಕ್ಯ = ______

(ಈ ಮೇಲಿನ ಉದಾಹರಣೆ ಗಮನಿಸು 'ಐ' ಮತ್ತು 'ಔ' ಎಂಬ ಸ್ವರಗಳಾದ ನಾವು 'ಅ' ಸ್ವರದ ಮುಂದೆ ಬಂದು ಸೇರುವುದನ್ನೇ **"ವೃದ್ಧಿಸಂಧಿ"** ಎಂದು ತಿಳಿದುಕೊಳ್ಳಬೇಕು.)

**ಒ) ಪೂರ್ವಪದ ಮತ್ತು ಉತ್ತರ ಪದಗಳಾದ ನಮ್ಮ ನಡುವೆ ಒಂದು ವ್ಯಂಜನ ಬಂದು ಮತ್ತೊಂದು ವ್ಯಂಜನ ಮರೆಯಾಗುತ್ತದೆ. ಇದನ್ನು ಮಾದರಿ ಸಹಾಯದಿಂದ ಬಿಡಿಸಿ ಬರೆಯಿರಿ.**

**ಮಾದರಿ :** ದಿಕ್ + ದರ್ಶನ = ದಿಗ್ದರ್ಶನ ⟶ ಹೋದ ವ್ಯಂಜನ (ಕ್)
ಬಂದ ವ್ಯಂಜನ (ಗ್)

1. ಷಟ್ + ಆನನ = ______
2. ವಾಕ್ + ದಾನ = ______
3. ಸತ್ + ಭಾವ = ______

@KTBS NOT TO BE REPUBLISHED

**ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ**

| ಕ್ರ.ಸಂ | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1. | ಕನ್ನಡ ಸಂಧಿಗಳನ್ನು ವಿವರಿಸಿ, ಉದಾಹರಣೆ ನೀಡುವೆ. | | | |
| 2. | ಸಂಧಿ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ಹೇಳುವೆ. | | | |
| 3. | ಸಂಸ್ಕೃತ ಸಂಧಿಗಳನ್ನು ಗುರುತಿಸಿ, ಉದಾಹರಣೆ ನೀಡುವೆ. | | | |
| 4. | ವಾಕ್ಯಗಳಲ್ಲಿ ಕರ್ತೃ, ಕರ್ಮ ಮತ್ತು ಕ್ರಿಯಾ ಪದಗಳನ್ನು ಗುರುತಿಸುವೆ. | | | |

| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|---|---|

# 12. ಅಭ್ಯಾಸ

**ಅ) ಈ ಕೆಳಗಿನ ವಾಕ್ಯಗಳಲ್ಲಿ ಗೆರೆ ಎಳೆದ ಪದಗಳನ್ನು ಬಿಡಿಸಿ ಬರೆಯಿರಿ.**

1. ಊರಲ್ಲಿ ಸಂಕ್ರಾಂತಿ ಹಬ್ಬವನ್ನು ಮಾಡಿದರು.
2. ರೈತರು ತೆನೆಯನ್ನು ಕೊಯ್ದು ಚೀಲದಲ್ಲಿ ತುಂಬಿದರು.
3. ಮಳೆಗಾಲದಲ್ಲಿ ಹೊಲಗದ್ದೆಗಳು ಹಸಿರಾಗಿರುತ್ತವೆ.
4. ಕೆರೆಯಲ್ಲಿ ನೀರು ತುಂಬಿದೆ.
5. ಹುಲ್ಲುಗಾವಲಿನಲ್ಲಿ ದನ ಕರುಗಳು ಮೇಯುತ್ತಿವೆ.

| | | | | |
|---|---|---|---|---|
| ಊರಲ್ಲಿ | = | | + | |
| ತೆನೆಯನ್ನು | = | | + | |
| ಮಳೆಗಾಲ | = | | + | |
| ಕೆರೆಯಲ್ಲಿ | = | | + | |
| ಹುಲ್ಲುಗಾವಲು | = | | + | |

@KTBS NOT TO BE REPUBLISHED

(ಮೊದಲ ಪದವನ್ನು **'ಪೂರ್ವಪದ'** ಎಂದೂ, ನಂತರದ ಪದವನ್ನು **'ಉತ್ತರಪದ'** ಎನ್ನುತ್ತೇವೆ.)

**ಆ) ಈ ಕೆಳಗಿನ ಪದಗಳನ್ನು ಕೂಡಿಸಿ ಬರೆಯಿರಿ .**

| | | | | | |
|---|---|---|---|---|---|
| 1. | ಎಳೆ | + | ಕರು | = | |
| 2. | ಹಳೆ | + | ಕನ್ನಡ | = | |
| 3. | ಗಿರಿ | + | ಅನ್ನು | = | |
| 4. | ಏನು | + | ಆದರೂ | = | |
| 5. | ದೇವರು | + | ಇಂದ | = | |
| 6. | ಮರೆ | + | ಇಂದ | = | |
| 7. | ದಾರಿ | + | ಅಲ್ಲಿ | = | |
| 8. | ಅವನ | + | ಊರು | = | |

ಇ) **ಈ ಕೆಳಗಿನ ಪದಗಳನ್ನು ಬಿಡಿಸಿ ಸಂಧಿ ಹೆಸರು ಬರೆಯಿರಿ.**

೧. ಎಲ್ಲೆಲ್ಲಿ = ______ + ______ = ______

೨. ಮನೆಯನ್ನು = ______ + ______ = ______

೩. ಶಾಲೆಯಲ್ಲಿ = ______ + ______ = ______

೪. ಊರೂರು = ______ + ______ = ______

೫. ಬೆಟ್ಟದಾವರೆ = ______ + ______ = ______

ಈ) **ಮೊದಲೆರಡು ಪದಗಳ ಸಂಬಂಧಿಸಿದಂತೆ ಮೂರನೆಯ ಪದಕ್ಕೂ ಸಂಬಂಧಿಸಿದ ಪದ ಬರೆಯಿರಿ.**

೧. ಪುಸ್ತಕವನ್ನು : ವಕಾರಾಗಮಸಂಧಿ : : ನೆಲವನ್ನು : ______

೨. ಗಿರಿ+ಅನ್ನು : ಗಿರಿಯನ್ನು : : ಮಾಡು + ಅನ್ನು : ______

೩. ಕಂಗೆಟ್ಟು : ಆದೇಶಸಂಧಿ : : ಮನವನ್ನು : ______

೪. ನೆಲವನ್ನು : ಆಗಮಸಂಧಿ : : ಮೈದೊಳೆ : ______

೫. ಮನೆಯಿಂದ : ಆಗಮಸಂಧಿ : : ನಾವೆಲ್ಲ : ______

@KTBS NOT TO BE REPUBLISHED

ಉ) **ಹೊಂದಿಸಿ ಬರೆಯಿರಿ.**

| | | |
|---|---|---|
| ೧. ಮರೆಯಿಂದ | ೧. ಊರು+ಅಲ್ಲಿ | |
| ೨. ಗಾಳಿ + ಅಲ್ಲಿ | ೨. ಯಕಾರಾಗಮ | |
| ೩. ದೇವರಿಂದ | ೩. ಚಳಿಯಲ್ಲಿ | |
| ೪. ಊರಲ್ಲಿ | ೪. ದೇವರು + ಇಂದ | |
| ೫. ಚಳಿ + ಅಲ್ಲಿ | ೫. ಗಾಳಿಯಲ್ಲಿ | |

**ಊ) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

೧. ಸಂಧಿ ಎಂದರೇನು?

೨. ಕನ್ನಡ ಸಂಧಿಗಳು ಯಾವುವು?

೩. ಲೋಪಸಂಧಿ ಎಂದರೇನು? ಉದಾ: ಕೊಡಿ.

• ೪. ಆಗಮ ಸಂಧಿ ಎಂದರೇನು? ಉದಾ. ಕೊಡಿ.

೫. ಆದೇಶಸಂಧಿ ಎಂದರೇನು? ಉದಾ: ಕೊಡಿ.

@KTBS NOT TO BE REPUBLISHED

**ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ**

| ಕ್ರ.ಸಂ | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1. | ಸ್ಪಷ್ಟ ಉಚ್ಚಾರಣೆಯೊಂದಿಗೆ ವಾಕ್ಯಗಳನ್ನು ಓದಿ ಬರೆಯುವೆ. | | | |
| 2. | ಸಣ್ಣ ಟಿಪ್ಪಣಿ / ಪ್ರಬಂಧವನ್ನು ಬರೆಯುವೆ. | | | |
| 3. | ನನ್ನ ಕಲ್ಪನೆಯಂತೆ ಸ್ವರಚಿತ ಕಥೆಯನ್ನು ಬರೆಯುವೆ. | | | |
| 4. | ಸಂದರ್ಭವನ್ನು ಅರ್ಥೈಸಿಕೊಂಡು ಸೂಕ್ತವಾಗಿ ಉತ್ತರಿಸುವೆ. | | | |

| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|---|---|

# 13. ಘಟಕ ಪರೀಕ್ಷೆ–4

**1. ಈ ಕೆಳಗಿನ ಪದಗಳನ್ನು ಸರಿಯಾಗಿ ಜೋಡಿಸಿ ಅರ್ಥಪೂರ್ಣ ವಾಕ್ಯ ಮಾಡಿರಿ.**

1. ದೇವನಹಳ್ಳಿ / ಡಿ.ವಿ.ಗುಂಡಪ್ಪ / ಅವರ / ಹುಟ್ಟೂರು
2. ಚಾವುಂಡರಾಯ/ಮಂತ್ರಿ/ಗಂಗರಸರ /ಜನರು/ರಾಯ/ಕರೆಯುತ್ತಿದ್ದರು/ ಆತನನ್ನು/ಎಂದು
3. ಆರಂಭವಾಯಿತು / ಗಾಂಧೀಜಿಯವರ / ಶಿಕ್ಷಣ / ಪ್ರೇರಣೆಯಿಂದ / ನವೀನ
4. ಅವರು / ಕನ್ನಡ ಸಾಹಿತ್ಯದ / ಆಧುನಿಕ / ಒಬ್ಬರು / ದಿಗ್ಗಜರಲ್ಲಿ / ಡಿ.ವಿ.ಜಿ.

**2. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವೆ.**

1. ಕರ್ತೃ, ಕರ್ಮ ಕ್ರಿಯಾಪದಗಳು ಸೇರಿ ಒಂದುಪೂರ್ಣ ಅರ್ಥಕೊಡುವ ವಾಕ್ಯ ಯಾವುದು?
2. ಒಂದು ಪ್ರಧಾನ ವಾಕ್ಯಕ್ಕೆ ಅನೇಕ ಅಧೀನವಾಕ್ಯಗಳು ಸೇರಿ ವಾಕ್ಯವಾಗಿದ್ದಲ್ಲಿ ಅದನ್ನು ಎಂತಹ ವಾಕ್ಯ ಎನ್ನುವರು?
3. ಎರಡು ಪ್ರತ್ಯೇಕವಾಗಿ ಅರ್ಥನೀಡಬಲ್ಲಂತಹ ವಾಕ್ಯಗಳು ಒಂದೇ ವಾಕ್ಯ ಆಗಿದ್ದರೆ ಅಂತಹ ವಾಕ್ಯವನ್ನು ಏನೆಂದು ಕರೆಯುತ್ತಾರೆ?

@KTBS NOT TO BE REPUBLISHED

**3. ಈ ಕೆಳಗಿನ ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆ ಹಾಕಿ.**

| | |
|---|---|
| 1. | ಬನ್ನಿ ನಾವಿಬ್ಬರೂ ಮುಂದಕ್ಕೆ ಹೋಗಿ ನೋಡಿಕೊಂಡು ಬರೋಣ |
| 2. | ಓಹೋ ಕನ್ನಡನಾಡು ಆಹಾ ಕನ್ನಡನುಡಿ |
| 3. | ಗಂಗರ ರಾಜಧಾನಿ ಯಾವುದು |
| 4. | ಜಯಪುರದ ಅರಮನೆ ಸುಂದರವಾಗಿದೆ |
| 5. | ಕಡೆಗೋಲು ಪದವು ಆದೇಶ ಸಂಧಿಗೆ ಉದಾಹರಣೆಯಾಗಿದೆ |

**4. ಈ ಕೆಳಗಿನ ಪದಗಳನ್ನು ಬಿಡಿಸಿ ಸಂಧಿ ಹೆಸರು ಬರೆಯುವೆನು.**

1. ಹನಿಗೂಡು : ______ + ______ = ______
2. ಮರದಲ್ಲಿ : ______ + ______ = ______
3. ಹೊಳೆಯಲ್ಲಿ : ______ + ______ = ______
4. ಏಕಾಕ್ಷ : ______ + ______ = ______

| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|---|---|